ದಿನಾಂಕ 03.08.2017 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ನಂ.1 ಮತ್ತು 2 ರವರ ಪರ ಶ್ರೀ ಎಸ್‌ಕೆಪಿ ವಕೀಲರಿಂದ

ನಾನು ಆಳಂದ ತಾಲೂಕಿನ ಕೌಲಗಾ ಗ್ರಾಮದಲ್ಲಿರುತ್ತೇನೆ. ನನ್ನ ಮದುವೆಯು 51 ವರ್ಷದ ಹಿಂದೆಯೇ ಆಗಿರುತ್ತದೆ. 25-ವರ್ಷಗಳ ಹಿಂದೆ ನನ್ನ ತಂದೆ ಮೃತಪಟ್ಟಿರುತ್ತಾರೆ. ನಮ್ಮ ತಂದೆಗೆ ಬಡದಾಳ ಸೀಮೆಯಲ್ಲಿ 10-ಎಕರೆ ಹಾಗೂ ಅರ್ಜುಣಗಿ ಸೀಮೆಯಲ್ಲಿ 7-ಎಕರೆ ಜಮೀನುಗಳಿದ್ದವು. ಸದರಿ ಅರ್ಜುಣಗಿ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಜಮೀನಿನ ಸರ್ವೆ ನಂ.52 ಇರುತ್ತದೆ. ಬಡದಾಳ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಜಮೀನಿನ ಸರ್ವೆ ನಂ.65 ಇರುತ್ತದೆ. ಸದರಿ ಜಮೀನು ಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಗಳು ನಮ್ಮ ಮನೆತನಕ್ಕೆ ಇರುವದಿಲ್ಲ.

ಸದರಿ ಜಮೀನು ಆಸ್ತಿಗಳ ಪೈಕಿ ಅರ್ಜುಣಗಿ ಸೀಮಾಂತರದಲ್ಲಿ ಬರುವ ಜಮೀನು ಮಲ್ಲಿನಾಥ ದೇವರಿಗೆ ಬಿಟ್ಟಂತಹ ಜಮೀನಾಗಿರುತ್ತದೆ. ಪ್ರತಿವಾದಿ ನಂ.1 ರಿಂದ 3 ರವರ ನಡುವೆ ಮನೆತನದ ಆಸ್ತಿಗಳಿಗೆ ಸಂಬಂಧಿಸಿದಂತೆ ಏನು ವ್ಯವಹಾರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸೋಲಾಪೂರದ ಮನೆ ನಂ.2175/ಎ-3 ಇದು ಪ್ರತಿವಾದಿ ನಂ.3 ರವರ ಹೆಸರಿನಲ್ಲಿರುತ್ತದೆ. ಸದರಿ ಆಸ್ತಿಯನ್ನು 3ನೇ ಪ್ರತಿವಾದಿ ಹೆಸರಿನಲ್ಲಿ ನಮ್ಮ ತಂದೆಯೇ ಖರೀದಿ ಮಾಡಿರುತ್ತಾನೆ.

ನನ್ನ ಮದುವೆಯಾದ ನಂತರ ನಾನು ದಾವಾದ ಜಮೀನುಗಳಿಗೆ 15-20 ವರ್ಷಗಳ ಹಿಂದೆ ಹೋಗಿ ಬರುವುದು ಮಾಡಿರುತ್ತೇನೆ. ಆದರೆ ಇತ್ತಿತ್ತಲಾಗಿ ಹೋಗಿರುವದಿಲ್ಲ. ಬಡದಾಳ ಗ್ರಾಮದಲ್ಲಿರುವ ಜಮೀನು ಸರ್ವೆ ನಂ.65 ಇದು ಈಗ ಪ್ರತಿವಾದಿ ನಂ.1 ಮತ್ತು 2 ರವರ ಹೆಸರಿನಲ್ಲಿರುತ್ತದೆ. ಅರ್ಜುಣಗಿ ಗ್ರಾಮದಲ್ಲಿ ಬರುವ ಸರ್ವೆ ನಂ.52 ಇದು ಪ್ರತಿವಾದಿ ನಂ.3 ರವರ ಹೆಸರಿನಲ್ಲಿರುತ್ತದೆ. ಸದರಿ ಆಸ್ತಿಗಳನ್ನು ಮೇಲೆ ವಿವರಿಸಿದಂತೆ ನಮ್ಮ ತಂದೆಯೇ ಹಂಚಿಕೊಟ್ಟಿರುತ್ತಾರೆ. ಈ ಕುರಿತು ಕಾಗದ ಪತ್ರ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ.

ಅರ್ಜುಣಗಿ ಗ್ರಾಮದಲ್ಲಿ ನಮ್ಮ ಮನೆತನಕ್ಕೆ ಸಂಬಂಧಿಸಿದ ಒಂದು ಮನೆ ಇರುತ್ತದೆ. ಸದರಿ ಮನೆ ಮುಂಚೆ ಹಳೆಯದಿದ್ದು ಅದನ್ನು 1ನೇ ಪ್ರತಿವಾದಿ ಕಟ್ಟಿಸಿರುತ್ತಾನೆ. ಸದರಿ ಮನೆಯಲ್ಲಿ ಈಗ ಗ್ರಾಮದ ಬೇರೆ ಜನರು ಇರುತ್ತಾರೆ. ನಮ್ಮ ತಾಯಿ 3ನೇ ಪ್ರತಿವಾದಿ ಹತ್ತಿರ ಇರುತ್ತಾಳೆ.

ಪ್ರತಿವಾದಿ ನಂ.1 ಮಿಲಟರಿಯಲ್ಲಿ ಸೇವೆ ಸಲ್ಲಿಸಿರುತ್ತಾರೆ. 1ನೇ ಪ್ರತಿವಾದಿ ನಿವೃತ್ತಿಯ ನಂತರ ಉಳುಮೆಗಾಗಿ ಜಮೀನು ಕೋರಿ ಸರಕಾರಕ್ಕೆ ಅರ್ಜಿ ಸಲ್ಲಿಸಿದ್ದ ಎಂದರೆ ನನಗೆ ಗೊತ್ತಿಲ್ಲ, ಆದರೆ ಜಮೀನು ಇಲ್ಲದವರಿಗೆ ಜಮೀನು ನೀಡುವ ಯೋಜನೆಯಲ್ಲಿ ಪ್ರತಿವಾದಿ ನಂ.1 ಮತ್ತು 2 ರವರು ಜಮೀನು ಸರಕಾರದಿಂದ ಪಡೆದುಕೊಂಡಿರುತ್ತಾರೆ.

ನನ್ನ ಹಾಗೂ ಪ್ರತಿವಾದಿ ನಂ.4 ಮತ್ತು 6 ರವರ ಮದುವೆಯನ್ನು ನಮ್ಮ ತಂದೆಯೇ ಮಾಡಿಕೊಟ್ಟಿರುತ್ತಾರೆ. ನಮ್ಮ ತಂದೆ ತೀರಿಕೊಂಡ ನಂತರ ವಾದಿ

ಗ್ರಾಮದಲ್ಲಿಯೇ ವಾಸಿಸುತ್ತಿದ್ದಳು. ಕಳೆದ 5-6 ವರ್ಷಗಳಿಂದ ನನ್ನ ತಾಯಿ (ವಾದಿ) ಪ್ರತಿವಾದಿ ನಂ.3 ರವರ ಹತ್ತಿರ ವಾಸಿಸುತ್ತಿದ್ದಾಳೆ. ಈ ದಿನ 3ನೇ ಪ್ರತಿವಾದಿ ನನ್ನನ್ನು ಸಾಕ್ಷಿ ಹೇಳಲು ಕರೆದುಕೊಂಡು ಬಂದಿದ್ದಾನೆ ಎಂದರೆ ಸರಿಯಲ್ಲ.

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಅಫಜಲಪೂರ